**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.6608/2018**

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಅಶೋಕನಗರ ಆರಕ್ಷಕ ಠಾಣೆ, ಬೆಂಗಳೂರು.

ವಿರುದ್ಧ

ಆರೋಪಿಯ ಹೆಸರುಃ ಹರೀಶ್ ಕೆ.ಎ

**ದೋಷಾರೋಪಣೆ**

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಶ್ರೇಯಾಂಶ ದೊಡ್ಡಮನಿ ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣಾ ಪಟ್ಟಿಯ ಆರೋಪಿಯಾದ ನೀವು ಬೆಂಗಳೂರು ನಗರದ ಲಾಂಗ್ ಪೋರ್ಡ್ ರಸ್ತೆಯ ಅವನ್ಯೂ ಕಟ್ಟಡದಲ್ಲಿರುವ ನಂ.14 ರಲ್ಲಿ ಶ್ರೇಯ್ ಇಕ್ವಿಪ್ ಮೆಂಟ್ ಪ್ರೈವೇಟ್ ಲಿ. ಕಂಪನಿಯಲ್ಲಿ ಚರ ಸ್ವತ್ತುಗಳ ಮಾರಾಟ ಮತ್ತು ವಿಲೇವಾರಿ ವಿಭಾಗದಲ್ಲಿ ಮ್ಯಾನೇಜರ್ ಆಗಿದ್ದು, ಸಾಕ್ಷಿ-16 ರವರಾದ ಶ್ರೀ ವಲ್ಲಬ್ ಎಸ್ ಅವರು ಸದರಿ ಕಂಪನಿಗೆ ಕರ್ನಾಟಕ ಪ್ರದೇಶದ ಮುಖ್ಯಸ್ಥರಾಗಿದ್ದು, ಆರೋಪಿಯಾದ ನೀವು ಕಂಪನಿಯು ನೀಡಿರುವ ಸಾಲದ ಸುಸ್ತಿದಾರರು ಅಡಮಾನ ಇಟ್ಟಿರುವ ಸ್ಥಿರಾಸ್ತಿಗಳ ವಿಲೇವಾರಿ ಮಾಡುವ (ಜಿ.ಪಿ.ಎ) ಅಧಿಕಾರವನ್ನು ನಿಮಗೆ ನೀಡಿರುತ್ತದೆಂದು ನಕಲಿಯಾಗಿ ಜಿ.ಪಿ.ಎ ಸೃಷ್ಟಿ ಮಾಡಿಕೊಂಡು ಸಾಕ್ಷಿ-1 ರವರಾದ ಗಂಗರಾಜು ಹೆಚ್.ಡಿ ಅವರನ್ನು ನಂಬಿಸಿ ಸಾಕ್ಷಿ-13 ರವರ ಮಾಲೀಕತ್ವದಲ್ಲಿರುವ ಬೆಂಗಳೂರು ನಗರ ಮುನ್ಸಿಪಲ್ ನಂ.10, ಹಳೆ ನಂ.15, ಪಿಐಡಿ ನಂ.77-106-10, ಪೂರ್ಣಪ್ರಸಾದ್ ರಸ್ತೆಯಲ್ಲಿರುವ ಸುಮಾರು ರೂ.30-40 ಕೋಟಿ ಬೆಲೆ ಬಾಳುವ 8284.8 ಘನ ಮೀಟರ್ ಅಳತೆಯುಳ್ಳ ನಿಮ್ಮದಲ್ಲದ ಮತ್ತು ನಿಮ್ಮ ವ್ಯಾಪ್ತಿಗೆ ಸಂಬಂಧಿಸಿದ್ದಲ್ಲದ ಶ್ರೇಯ ಕಂಪನಿಯಲ್ಲಿ ಸಾಕ್ಷಿ-13 ರವರು ಸಾಲ ಸೌಲಭ್ಯಕ್ಕಾಗಿ ಅಡಮಾನ ಇಟ್ಟಿದ್ದ ಕಟ್ಟಡವನ್ನು ಅಕ್ರಮವಾಗಿ ಸಾಕ್ಷಿ- ಶಿಲ್ಪಾ ಗೌತಮ್ ಮತ್ತು ಸಾಕ್ಷಿ -5 ಸುಮನ್ ಅವರಿಗೆ ಮಾರಾಟ ಮಾಡುವುದಾಗಿ ದಿನಾಂಕ 02.02.2016 ರಂದು ಒಪ್ಪಂದ ಮಾಡಿಕೊಂಡು ಸಾಕ್ಷಿ-1 ರವರ ಮುಖಾಂತರ ಕಟ್ಟಡ ಮಾರಾಟ ಮುಂಗಡವಾಗಿ ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಆಂದ್ರ ಬ್ಯಾಂಕ್ ಶಾಖೆಯ ಡಿಡಿ ಗಳ ಮುಖಾಂತರ 1

ಕೋಟಿ ಹಣವನ್ನು ಮತ್ತು ಗಾಂಧೀನಗರದ ಐಡಿಬಿಐ ಬ್ಯಾಂಕಿನ ತಲಾ ರೂ.25 ಲಕ್ಷ ಗಳ 4 ಡಿಡಿಗಳನ್ನು ಆರೋಪಿಯಾದ ನೀವು ಪಡೆದುಕೊಂಡಿದ್ದು , ಸಾಕ್ಷಿ-1 ರವರು ಕೊಟ್ಟಿದ್ದ ರೂ.2 ಕೋಟಿ ಗಳ ಡಿಡಿ ಗಳನ್ನು ಶ್ರೇಯ್ ಕಂಪನಿಗಳ ವಾಹನಗಳ ಮಾರಾಟದಿಂದ ಬಂದ ಹಣವೆಂದು ಬಿಂಬಿಸಿ ಶ್ರೇಯ್ ಕಂಪನಿಗೆ ಜಮಾ ಮಾಡಿ ನಂಬಿಕೆದ್ರೋಹವೆಸಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.406 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಎರಡನೇಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ-13 ರವರ ಮಾಲೀಕತ್ವದಲ್ಲಿರುವ ಬೆಂಗಳೂರು ನಗರ ಮುನ್ಸಿಪಲ್ ನಂ.10, ಹಳೆ ನಂ.15, ಪಿಐಡಿ ನಂ.77-106-10, ಪೂರ್ಣಪ್ರಸಾದ್ ರಸ್ತೆಯಲ್ಲಿರುವ ಸುಮಾರು ರೂ.30-40 ಕೋಟಿ ಬೆಲೆ ಬಾಳುವ 8284.8 ಘನ ಮೀಟರ್ ಅಳತೆಯುಳ್ಳ ನಿಮ್ಮದಲ್ಲದ ಮತ್ತು ನಿಮ್ಮ ವ್ಯಾಪ್ತಿಗೆ ಸಂಬಂಧಿಸಿದ್ದಲ್ಲದ ಶ್ರೇಯ ಕಂಪನಿಯಲ್ಲಿ ಸಾಕ್ಷಿ-13 ರವರು ಸಾಲ ಸೌಲಭ್ಯಕ್ಕಾಗಿ ಅಡಮಾನ ಇಟ್ಟಿದ್ದ ಕಟ್ಟಡವನ್ನು ಅಕ್ರಮವಾಗಿ ಸಾಕ್ಷಿ- ಶಿಲ್ಪಾ ಗೌತಮ್ ಮತ್ತು ಸಾಕ್ಷಿ -5 ಸುಮನ್ ಅವರಿಗೆ ಮಾರಾಟ ಮಾಡುವುದಾಗಿ ದಿನಾಂಕ 02.02.2016 ರಂದು ಒಪ್ಪಂದ ಮಾಡಿಕೊಂಡು ಸಾಕ್ಷಿ-1 ರವರ ಮುಖಾಂತರ ಕಟ್ಟಡ ಮಾರಾಟ ಮುಂಗಡವಾಗಿ ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಆಂದ್ರ ಬ್ಯಾಂಕ್ ಶಾಖೆಯ ಡಿಡಿ ಗಳ ಮುಖಾಂತರ 1 ಕೋಟಿ ಹಣವನ್ನು ಮತ್ತು ಗಾಂಧೀನಗರದ ಐಡಿಬಿಐ ಬ್ಯಾಂಕಿನ ತಲಾ ರೂ.25 ಲಕ್ಷ ಗಳ 4 ಡಿಡಿಗಳನ್ನು ಆರೋಪಿಯಾದ ನೀವು ಪಡೆದುಕೊಂಡಿದ್ದು , ಸಾಕ್ಷಿ-1 ರವರು ಕೊಟ್ಟಿದ್ದ ರೂ.2 ಕೋಟಿ ಗಳ ಡಿಡಿ ಗಳನ್ನು ಶ್ರೇಯ್ ಕಂಪನಿಗಳ ವಾಹನಗಳ ಮಾರಾಟದಿಂದ ಬಂದ ಹಣವೆಂದು ಬಿಂಬಿಸಿ ಶ್ರೇಯ್ ಕಂಪನಿಗೆ ಜಮಾ ಮಾಡಿ ಖರೀದಿದಾರರಿಗೆ ಮೋಸ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಮೂರನೇಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ-13 ರವರ ಮಾಲೀಕತ್ವದಲ್ಲಿರುವ ಮೇಲ್ಕಂಡ ಕಟ್ಟಡವನ್ನು ಸಾಲ ಸೌಲಭ್ಯಕ್ಕಾಗಿ ಅಡಮಾನ ಇಟ್ಟಿದ್ದ ಕಟ್ಟಡವನ್ನು ಅಕ್ರಮವಾಗಿ ಸಾಕ್ಷಿ- ಶಿಲ್ಪಾ ಗೌತಮ್ ಮತ್ತು ಸಾಕ್ಷಿ -5 ಸುಮನ್ ಅವರಿಗೆ ಮಾರಾಟ ಮಾಡುವುದಾಗಿ ದಿನಾಂಕ 02.02.2016 ರಂದು ಒಪ್ಪಂದ ಮಾಡಿಕೊಂಡು ಸಾಕ್ಷಿ-1 ರವರ ಮುಖಾಂತರ ಕಟ್ಟಡ ಮಾರಾಟ ಮುಂಗಡವಾಗಿ ಮೇಲೆ ಹೇಳಿದ ಬ್ಯಾಂಕುಗಳಿಂದ ರೂ.2 ಕೋಟಿ ಗಳ ಡಿಡಿ ಗಳನ್ನು ಶ್ರೇಯ್ ಕಂಪನಿಗಳ ವಾಹನಗಳ ಮಾರಾಟದಿಂದ

ಬಂದ ಹಣವೆಂದು ಬಿಂಬಿಸಿ , ಕಂಪನಿಯು ನೀಡಿರುವ ಸಾಲದ ಸುಸ್ತಿದಾರರು ಅಡಮಾನ ಇಟ್ಟಿರುವ ಸ್ಥಿರಾಸ್ತಿಗಳ ವಿಲೇವಾರಿ ಮಾಡುವ (ಜಿ.ಪಿ.ಎ) ಅಧಿಕಾರವನ್ನು ನಿಮಗೆ ನೀಡಿರುತ್ತದೆಂದು ನಕಲಿಯಾಗಿ ಜಿ.ಪಿ.ಎ ಸೃಷ್ಟಿ ಮಾಡಿಕೊಂಡು ಸದರಿ ಹಣವನ್ನು ಶ್ರೇಯ್ ಕಂಪನಿಗೆ ಜಮಾ ಮಾಡಿ ಖರೀದಿದಾರರಿಗೆ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.465 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ-13 ರವರ ಮಾಲೀಕತ್ವದಲ್ಲಿರುವ ಮೇಲ್ಕಂಡ ಕಟ್ಟಡವನ್ನು ಸಾಲ ಸೌಲಭ್ಯಕ್ಕಾಗಿ ಅಡಮಾನ ಇಟ್ಟಿದ್ದ ಕಟ್ಟಡವನ್ನು ಅಕ್ರಮವಾಗಿ ಸಾಕ್ಷಿ- ಶಿಲ್ಪಾ ಗೌತಮ್ ಮತ್ತು ಸಾಕ್ಷಿ -5 ಸುಮನ್ ಅವರಿಗೆ ಮಾರಾಟ ಮಾಡುವುದಾಗಿ ದಿನಾಂಕ 02.02.2016 ರಂದು ಒಪ್ಪಂದ ಮಾಡಿಕೊಂಡು ಸಾಕ್ಷಿ-1 ರವರ ಮುಖಾಂತರ ಕಟ್ಟಡ ಮಾರಾಟ ಮುಂಗಡವಾಗಿ ಮೇಲೆ ಹೇಳಿದ ಬ್ಯಾಂಕುಗಳಿಂದ ರೂ.2 ಕೋಟಿ ಗಳ ಡಿಡಿ ಗಳನ್ನು ಶ್ರೇಯ್ ಕಂಪನಿಗಳ ವಾಹನಗಳ ಮಾರಾಟದಿಂದ ಬಂದ ಹಣವೆಂದು ಬಿಂಬಿಸಿ , ಕಂಪನಿಯು ನೀಡಿರುವ ಸಾಲದ ಸುಸ್ತಿದಾರರು ಅಡಮಾನ ಇಟ್ಟಿರುವ ಸ್ಥಿರಾಸ್ತಿಗಳ ವಿಲೇವಾರಿ ಮಾಡುವ (ಜಿ.ಪಿ.ಎ) ಅಧಿಕಾರವನ್ನು ನಿಮಗೆ ನೀಡಿರುತ್ತದೆಂದು ತಂತ್ರಾಂಶದಲ್ಲಿ ನಕಲಿಯಾಗಿ ಜಿ.ಪಿ.ಎ ಸೃಷ್ಟಿ ಮಾಡಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.468 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಐದನೇಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ-13 ರವರ ಮಾಲೀಕತ್ವದಲ್ಲಿರುವ ಮೇಲ್ಕಂಡ ಕಟ್ಟಡವನ್ನು ಸಾಲ ಸೌಲಭ್ಯಕ್ಕಾಗಿ ಅಡಮಾನ ಇಟ್ಟಿದ್ದ ಕಟ್ಟಡವನ್ನು ಅಕ್ರಮವಾಗಿ ಸಾಕ್ಷಿ- ಶಿಲ್ಪಾ ಗೌತಮ್ ಮತ್ತು ಸಾಕ್ಷಿ -5 ಸುಮನ್ ಅವರಿಗೆ ಮಾರಾಟ ಮಾಡುವುದಾಗಿ ದಿನಾಂಕ 02.02.2016 ರಂದು ಒಪ್ಪಂದ ಮಾಡಿಕೊಂಡು ಸಾಕ್ಷಿ-1 ರವರ ಮುಖಾಂತರ ಕಟ್ಟಡ ಮಾರಾಟ ಮುಂಗಡವಾಗಿ ಮೇಲೆ ಹೇಳಿದ ಬ್ಯಾಂಕುಗಳಿಂದ ರೂ.2 ಕೋಟಿ ಗಳ ಡಿಡಿ ಗಳನ್ನು ಶ್ರೇಯ್ ಕಂಪನಿಗಳ ವಾಹನಗಳ ಮಾರಾಟದಿಂದ ಬಂದ ಹಣವೆಂದು ಬಿಂಬಿಸಿ , ಕಂಪನಿಯು ನೀಡಿರುವ ಸಾಲದ ಸುಸ್ತಿದಾರರು ಅಡಮಾನ ಇಟ್ಟಿರುವ ಸ್ಥಿರಾಸ್ತಿಗಳ ವಿಲೇವಾರಿ ಮಾಡುವ (ಜಿ.ಪಿ.ಎ) ಅಧಿಕಾರವನ್ನು ನಿಮಗೆ ನೀಡಿರುತ್ತದೆಂದು ನಕಲಿಯಾಗಿ ಜಿ.ಪಿ.ಎ ಸೃಷ್ಟಿ ಮಾಡಿಕೊಂಡು ನೈಜವಾದುದೆಂದು ಬಿಂಬಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.471 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಆರನೇಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ-13 ರವರ ಮಾಲೀಕತ್ವದಲ್ಲಿರುವ ಮೇಲ್ಕಂಡ ಕಟ್ಟಡವನ್ನು ಸಾಲ ಸೌಲಭ್ಯಕ್ಕಾಗಿ ಅಡಮಾನ ಇಟ್ಟಿದ್ದ ಕಟ್ಟಡವನ್ನು ಅಕ್ರಮವಾಗಿ ಸಾಕ್ಷಿ- ಶಿಲ್ಪಾ ಗೌತಮ್ ಮತ್ತು ಸಾಕ್ಷಿ -5 ಸುಮನ್ ಅವರಿಗೆ ಮಾರಾಟ ಮಾಡುವುದಾಗಿ ದಿನಾಂಕ 02.02.2016 ರಂದು ಒಪ್ಪಂದ ಮಾಡಿಕೊಂಡು ಸಾಕ್ಷಿ-1 ರವರ ಮುಖಾಂತರ ಕಟ್ಟಡ ಮಾರಾಟ ಮುಂಗಡವಾಗಿ ಮೇಲೆ ಹೇಳಿದ ಬ್ಯಾಂಕುಗಳಿಂದ ರೂ.2 ಕೋಟಿ ಗಳ ಡಿಡಿ ಗಳನ್ನು ಶ್ರೇಯ್ ಕಂಪನಿಗಳ ವಾಹನಗಳ ಮಾರಾಟದಿಂದ ಬಂದ ಹಣವೆಂದು ಬಿಂಬಿಸಿ , ಕಂಪನಿಯು ನೀಡಿರುವ ಸಾಲದ ಸುಸ್ತಿದಾರರು ಅಡಮಾನ ಇಟ್ಟಿರುವ ಸ್ಥಿರಾಸ್ತಿಗಳ ವಿಲೇವಾರಿ ಮಾಡುವ (ಜಿ.ಪಿ.ಎ) ಅಧಿಕಾರವನ್ನು ನಿಮಗೆ ನೀಡಿರುತ್ತದೆಂದು ನಕಲಿಯಾಗಿ ಜಿ.ಪಿ.ಎ ಸೃಷ್ಟಿ ಮಾಡಿಕೊಂಡು ಸದರಿ ನಕಲಿ ಜಿ.ಪಿ.ಎ. ನ್ನು ನಾಶ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.204 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರ:1 ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

ಉಃ

ಪ್ರ:2 ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉಃ

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕಃ12.12.2023 3 ನೇ ಎ.ಸಿ.ಎಂ.ಎಂ., ನ್ಯಾಯಾಲಯ, ಬೆಂಗಳೂರು.